**ಅ. ದಾ. ಸಂ. ಃ 355/2016**

**ಪಿ.ಡಬ್ಲ್ಯೂ ಃ 01**

ದಿನಾಂಕ ಃ **23-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- ಪ್ರತಿವಾದಿಯ ಪರ ಶ್ರೀ. ಪಿ.ಎಂ.ಎಸ್.** ವಕೀಲರಿಂದ ಃ-

4. ನಾಗಹನುಮಯ್ಯನವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ 3 ಜನ ಹೆಣ್ಣು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ಅವರುಗಳೆಂದರೆ 1 ನೇ ಚನ್ನಪ್ಪ, 2 ನೇ ಸುರೇಶ, 3 ನೇ ನಾಗರಾಜು, 4 ನೇ ಚನ್ನಮ್ಮ, 5 ನೇ ನಾಗಮ್ಮ ಮತ್ತು 6 ನೇ ರತ್ನಮ್ಮ ಎಂದು ನುಡಿಯುತ್ತಾರೆ. ನಿಮ್ಮ ತಾತನವರಿಂದ ಯಾರಿಗೆ ಎಷ್ಟೇಷ್ಟು ಭಾಗ ಬಂದಿರುತ್ತದೆಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಯಾವ ರೀತಿಯಲ್ಲಿ ಭಾಗ ಬಂದಿರುತ್ತದೆಂದರೆ ಸಾಕ್ಷಿ ವಿಭಾಗಪತ್ರದ ಮೂಲಕ ಬಂದಿರುತ್ತದೆಂದು, ಸದರಿ ವಿಭಾಗಪತ್ರ ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

5. ನಿಮ್ಮ ತಂದೆಯ ಮೊದಲ ಹೆಂಡತಿ ಸಿದ್ದಗಂಗಮ್ಮನವರನ್ನು ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾತನವರ ಹೆಸರಿನಲ್ಲಿ ವಿಭಾಗ ರೀತಿಯಲ್ಲಿ ಬಂದಿರುವ ಸ್ವತ್ತುಗಳು ಬಿಟ್ಟು ಬೇರೆ ಆಸ್ತಿಗಳು ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರ್.ಎ-254/2014 ರಂತೆ ಮಾನ್ಯ ಅಪರ ಹಿರಿಯ ಶ್ರೇಣಿ ಮಾಗಡಿ ನ್ಯಾಯಾಲಯದಲ್ಲಿ ದಾವೆ ಇದ್ದು, ಆ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ತಿಳಿದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಅಸಲು ದಾವ-510/2020 ರಂತೆ ಮಾನ್ಯ ಅಪರ ಹಿರಿಯ ಶ್ರೇಣಿ ಮಾಗಡಿ ನ್ಯಾಯಾಲಯದಲ್ಲಿ

ದಾವೆ ಇದ್ದು, ಆ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರ ಸ್ವಂತ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ನಿಮ್ಮ ಚಿಕ್ಕಪ್ಪ ಚಂದ್ರೇಶರವರ ಮೇಲೆ ದಾವೆ ಹೂಡಿರುತ್ತಾರೆ, ಆ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ನೀವು ಎಲ್ಲಿ ವ್ಯಾಸಂಗ ಮಾಡಿರುತ್ತೀರಿ ಎಂದರೆ ಸಾಕ್ಷಿ ಮುತ್ತಯ್ಯನಪಾಳ್ಯದಲ್ಲಿ 1 ರಿಂದ 5ನೇ ತರಗತಿವರೆವಿಗೂ ವ್ಯಾಸಂಗ ಮಾಡಿರುತ್ತೇನೆಂದು ನುಡಿಯುತ್ತಾರೆ. ನಂತರ ರಾಮನಗರದ ಐಜೂರಿನಲ್ಲಿ ವ್ಯಾಸಂಗ ಮಾಡಿರುತ್ತೇನೆ. ನಿಮ್ಮ ತಾಯಿಯವರು ರಾಮಚಂದ್ರ ಎಂಬುವರನ್ನು ಮದುವೆ ಆಗಿರುತ್ತಾರೆಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಒಬ್ಬರು ತಂಗಿ ಇರುತ್ತಾರಂದರೆ ಸಾಕ್ಷಿ ನನ್ನ ಚಿಕ್ಕಮ್ಮ ಮಗಳು ಲಕ್ಷ್ಮೀ ಎಂಬುವರು ಇದ್ದಾರೆಂದು ನುಡಿಯುತ್ತಾರೆ. ನಿಮ್ಮ ತಾಯಿಯವರು ಐಶ್ವರ್ಯ ಎನ್ ಎಂಬ ಮಗಳಿದ್ದಾರೆ, ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಾಯಿಯವರು ಬಿ.ಎನ್ ರೋಡ್, ಮಾಯಗಾನಹಳ್ಳಿ, ಮೂಲೆಗೊಂಡಿಯಲ್ಲಿ ರಾಮಚಂದ್ರಯ್ಯನವರ ಜೊತೆ ವಾಸವಿರುತ್ತಾರೆಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲಎಂದು ನುಡಿಯುತ್ತಾರೆ. ನೀವು ದಿಃ 10-01-2023 ರಂದು ಮರಿಕುಪ್ಪೆ ಗ್ರಾಮದ 1ನೇ ಪ್ರತಿವಾದಿ ಮನೆಯ ಮುಂದೆ ಹೋಗಿ ನೀವು, ಚಂದ್ರೇಶ ಹೋಗಿ ಗಲಾಟೆ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೋಗಿದ್ದೇವು, ಗಲಾಟೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನವೆಂಬರ್-2016ನೇ ಇಸವಿಯಲ್ಲಿ ನೀವು 1 ನೇ ಪ್ರತಿವಾದಿಯವರನ್ನು ಭಾಗ

ಕೊಡಿ ಎಂದು ಕೇಳಿರುತ್ತೀರಾ ಎಂದು ನಿಮ್ಮ ದಾವಯಲ್ಲಿ ಬರೆಯಿಸಿದ್ದು, ಯಾರು ಯಾರು ಹೋಗಿ ಭಾಗ ಕೇಳಿರುತ್ತೀರಾ ಎಂದರೆ ಸಾಕ್ಷಿ ನಾವು ಮತ್ತು ನನ್ನ ಚಿಕ್ಕಪ್ಪನಾದ ನಾಗರಾಜು ಮತ್ತು ಸುರೇಶವರನ್ನು ಹೋಗಿ ಭಾಗ ಕೇಳಿರುತ್ತೇವೆಂದು ನುಡಿಯುತ್ತಾರೆ. ನಾಗರಾಜು ಮತ್ತು ಸುರೇಶ ರವರು ಎಲ್ಲಿ ವಾಸ ಮಾಡುತ್ತಿದ್ದಾರೆಂದರೆ ಸಾಕ್ಷಿ ನಾಗರಾಜು ರವರು ಮರಿಕುಪ್ಪೆ ಹಾಗೂ ಸುರೇಶ ರವರು ನೆಲಮಂಗಲದಲ್ಲಿ ವಾಸ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ನಿಮ್ಮ ತಾಯಿಯವರನ್ನು ಪಕ್ಷಗಾರರನಾಗಿ ಮಾಡಿದರೆ ಸತ್ಯಾಂಶ ಹೊರಬರುತ್ತದೆಂದು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

7. ನೀವು ಹಾಗೂ ನಿಮ್ಮ ಚಿಕ್ಕಪ್ಪನವರು ಜಂಟಿಯಾಗಿ ವ್ಯವಸಾಯ ಮಾಡುತ್ತಿರುವ ವಿಚಾರ ಸುಳ್ಳು ಎಂದರೆ ಸಾಕ್ಷಿ ಮೊದಲು ನನ್ನ ಚಿಕ್ಕಪ್ಪನವರ ಜೊತೆ ಜಂಟಿಯಾಗಿ ಮಾಡುತ್ತಿದ್ದೇವು, ದಾವೆ ಹೂಡಿದ ನಂತರದಲ್ಲಿ ಪ್ರತಿವಾದಿಗಳು ವ್ಯವಸಾಯ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ನಿಪಿ-5 ಮತ್ತು 6 ನ್ನು ಸೃಷ್ಟಿಸಿಕೊಂಡು ಭಾಗಾಂಶ ಕೋಡಿ ಎಂದು ಸುಳ್ಳು ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ನಿಮಗೂ ಹಾಗೂ ಪ್ರತಿವಾದಿಯವರ ಕುಟಂಬಕ್ಕೂ ಯಾವುದೇ ಸಂಬಂಧವಿಲ್ಲ, ನಿಮ್ಮ ಚಿಕ್ಕಪ್ಪ ಚಂದ್ರೇಶನವರ ಜೊತೆ ಷರೀಕ್ ಆಗಿ ಚಂದ್ರೇಶ ಮತ್ತು ಪ್ರತಿವಾದಿಗೂ ದ್ವೇಷಇರುವುದರಿಂದ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಹೂಡಿರುತ್ತೀರಾ ಎಂದರೆ ಸರಿಯಲ್ಲ. ನೀವು ಇಷ್ಟು ವರ್ಷದಿಂದ ಭಾಗ ಕೇಳದೆ ಏನು ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಪ್ರತಿವಾದಿಗಳು ಹೆಣ್ಣು ಮಕ್ಕಳ ಜೊತೆ ಸೇರಿ ಕ್ರಯಪತ್ರ ಮಾಡಿರುತ್ತಾರೆ, ಆಗಾಗಿ ದಾವೆ ಹೂಡಿರುತ್ತೇವೆಂದು ನುಡಿಯುತ್ತಾರೆ. ನೀವು ಮಕ್ಕಳು ಎಂದು ಹೇಳಿ ನಿಮ್ಮ ತಾಯಿಯವರು ದಾವೆಯನ್ನು ಹೂಡಿರುತ್ತಾರಾ ಅಥವಾ ಪರಿಹಾರ ಕೋರಿ ದಾವ ಹೂಡಿರುತ್ತಾರಾ

ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**